ಓ.ಎಸ್.ನಂ.**9/11**
ಡಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **17.04.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್.ವಕೀಲರಿಂದ**

ವಾದಿಯು ಸರ್ವೆ ನಂ.**123/3** ಕ್ಕೆ ಸಂಬಂಧಿಸಿದಂತೆ ದಾವಾ ಹಾಕಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ವಿಸ್ತೀರ್ಣ **19** ಗುಂಟೆ ಎಂದರೆ ಸರಿ. ದಾವಾ ಆಸ್ತಿಯ ಚಕ್ಕುಬಂಧಿ ಗೊತ್ತು. ಪೂರ್ವಕ್ಕೆ – ಗಂಗಪ್ಪನವರ ಆಸ್ತಿ, ಪಶ್ಚಿಮಕ್ಕೆ – ಪಾಪಮ್ಮನವರ ಆಸ್ತಿ, ಉತ್ತರಕ್ಕೆ – ಸರ್ಕಾರಿ ಹಳ್ಳ ಹಾಗೂ ದಕ್ಷಿಣಕ್ಕೆ – ಚಂದ್ರಶೇಖರ್ ರವರ ಆಸ್ತಿ ಇದೆ. ದಾವಾ ಆಸ್ತಿಯನ್ನು ಖರೀದಿಸಿದ ಎಷ್ಟು ವರ್ಷದ ಮೊದಲಿನಿಂದ **1**ನೇ ಪ್ರತಿವಾದಿಯ ಪರಿಚಯವಿತ್ತು ಎಂದರೆ ಸಾಕ್ಷಿಯು ನನಗೆ ಅವರ ಪರಿಚಯವಿರಲಿಲ್ಲ, ಮೂರನೇ ವ್ಯಕ್ತಿಯ ಕಡೆಯಿಂದ ಅವರ ಪರಿಚಯವಾಗಿರುತ್ತದೆ ಎಂದು ಹೇಳುತ್ತಾರೆ. ಕ್ರಯದ ಸಮಯದಲ್ಲಿ ನಾನು ವಿಭಾಗ ಪತ್ರ, **1**ನೇ ಪ್ರತಿವಾದಿಯ ಹೆಸರಿನಲ್ಲಿರುವ ಖಾತೆ ಮತ್ತು ಪಹಣಿ, ಮ್ಯೂಟೇಷನ್ ಮತ್ತು ಸರ್ವೆ ಸ್ಕೆಚ್‌ನ್ನು ಪಡೆದುಕೊಂಡಿರುತ್ತೇನೆ. ಅವುಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ದಿನಾಂಕಃ**01.10.1995** ರಲ್ಲಿ **1**ನೇ ಪ್ರತಿವಾದಿ ಹಾಗೂ ಅವರ ಕುಟುಂಬದವರ ನಡುವೆ ಪಂಚಾಯತಿ ಪಾರಿಕತ್ ಆಗಿರುತ್ತದೆ. ಸದರಿ ವಿಭಾಗವು **1**ನೇ ಪ್ರತಿವಾದಿ, ಅವರ ತಾಯಿ ಮತ್ತು ಸಹೋದರನ ನಡುವೆ ಆಗಿರುತ್ತದೆ. **1**ನೇ ಪ್ರತಿವಾದಿಗೆ ಒಬ್ಬರೇ ಸಹೋದರರಿದ್ದಾರೆ ಎಂದು ಪಾರಿಕತ್‌ನಲ್ಲಿ ನಮೂದಾಗಿರುತ್ತದೆ. **1**ನೇ ಪ್ರತಿವಾದಿಗೆ ಎಷ್ಟು ಜನ ಸಹೋದರರಿದ್ದಾರೆ ಎಂದರೆ ಗೊತ್ತಿಲ್ಲ. ಕ್ರಯದ ಸಮಯದಲ್ಲಿ ಆಂಜಿನಪ್ಪನವರಿಗೆ ಎಷ್ಟು ಜನ ಮಕ್ಕಳಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ

ಇಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಒಬ್ಬಳು ಮಗಳಿದ್ದಾಳೆ ಎಂದು ಹೇಳುತ್ತಾರೆ. ಕ್ರಯಕ್ಕೆ ಪಡೆದ ಸಮಯದಲ್ಲಿ 1ನೇ ಪ್ರತಿವಾದಿಯ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿ. ಸಾಮಾನ್ಯವಾಗಿ ಪಿತ್ರಾರ್ಜಿತ ಆಸ್ತಿಯನ್ನು ಖರೀದಿಸುವಾಗ ಮಾರಾಟಗಾರಿಗೆ ಎಷ್ಟು ಜನ ವಾರಸ್ಸುದಾರರಿದ್ದಾರೆ ಎಂದು ಅವರ ಕುಟುಂಬಕ್ಕೆ ಸಂಬಂಧಿಸಿದ ವಂಶವೃಕ್ಷವನ್ನು ಪಡೆದುಕೊಳ್ಳುವ ವಾಡಿಕೆ ಇದೆ ಎಂದರೆ ಗೊತ್ತಿಲ್ಲ. ಕ್ರಯದ ಸಮಯದಲ್ಲಿ ಕಾನೂನು ಸಲಹೆ ಪಡೆದುಕೊಂಡಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಯನ್ನು ಖರೀದಿಸುವಾಗ 1ನೇ ಪ್ರತಿವಾದಿಗೆ ಎಷ್ಟು ಜನ ವಾರಸ್ಸುದಾರರಿದ್ದಾರೆ ಹಾಗೂ ಅವರಿಗೆ ಎಷ್ಟು ಜನ ಹೆಂಡತಿ ಮಕ್ಕಳಿದ್ದಾರೆ ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ.

ಕ್ರಯದ ಮಾತುಕತೆಯ ಸಮಯದಲ್ಲಿ ನಾನು, 1ನೇ ಪ್ರತಿವಾದಿ ಹಾಗೂ ಬ್ರೋಕರ್ ಇದ್ದೆವು. ಆ ದಿನ 1ನೇ ಪ್ರತಿವಾದಿಯು ಅವರು ಕಷ್ಟದಲ್ಲಿದ್ದಾರೆ ಹಾಗಾಗಿ ಜಮೀನನ್ನು ಮಾರಾಟಕ್ಕೆ ಇಟ್ಟಿದ್ದೇನೆಂದು ಹೇಳುತ್ತಾರೆ. 1ನೇ ಪ್ರತಿವಾದಿಯು ಅವರ ಹೆಂಡತಿ ಮೃತಪಟ್ಟಿದ್ದಾರೆ ಹಾಗೂ ಅವರಿಗೆ ಒಬ್ಬಳು ಮಗಳಿದ್ದಾಳೆ ಎಂದು ಹೇಳಿದ್ದರು. ಅವರ ಹೆಂಡತಿ ಮೃತಪಟ್ಟ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೀರಾ ಎಂದರೆ ಇಲ್ಲ. ಅವರ ಹೆಂಡತಿ ಹೆಸರನ್ನು ನಾನು ಕೇಳಿ ತಿಳಿದುಕೊಂಡಿಲ್ಲ. ನನ್ನ ಮತ್ತು 1ನೇ ಪ್ರತಿವಾದಿಯ ನಡುವೆ ಯಾವುದೇ ಕ್ರಯದ ಕರಾರು ಪತ್ರ ಆಗಿರುವುದಿಲ್ಲ. ಕ್ರಯದ ಮಾತುಕತೆಯಾದ ನಂತರ ನೇರವಾಗಿ ನಾವು ಕ್ರಯಪತ್ರ ಮಾಡಿಕೊಂಡಿದ್ದೇವೆ. ಸದರಿ ಮಾತುಕತೆ ಹಾಗೂ ಕ್ರಯ ಪತ್ರ ನೋಂದಣಿ ಆಗುವ ನಡುವೆ ಒಂದು ವಾರ ಅಂತರವಿತ್ತು. ಮಾತುಕತೆಯ ಸಮಯದಲ್ಲಿ ದಾಖಲೆಗಳನ್ನು ನೋಡಿರುತ್ತೇನೆ. ಆದರೆ ನೋಂದಣಿ ಸಮಯದಲ್ಲಿ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾರಾದರೂ ವಾರಸ್ಸುದಾರರು ಇದ್ದಾರಾ ಎಂದು ಪತ್ರಿಕೆ ಪ್ರಕಟಣೆ ಹೊರಡಿಸಿದ್ದೀರಾ ಎಂದರೆ ಇಲ್ಲ. ಕ್ರಯದ ಮಾತುಕತೆಯನ್ನು ದೊಡ್ಡಬಳ್ಳಾಪುರ ಟೌನ್ ನಲ್ಲಿ ನನ್ನ ಅಂಗಡಿಯ ಹತ್ತಿರ ಆಗಿರುತ್ತದೆ. ಕ್ರಯಪತ್ರದ ನೋಂದಣಿಗೆ ಸಂಬಂಧಿಸಿದಂತೆ

ದಾಖಲೆಗಳನ್ನು ನಾನೇ ತಯಾರಿಸಿದ್ದೇನೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ಭಾಸ್ಕರಚಾರಿಯವರ ಹತ್ತಿರ ಬರೆಸಿದ್ದೇನೆ ಎಂದರೆ ಸರಿ. ಮೇ **2006** ರಲ್ಲಿ ಕ್ರಯದ ಮಾತುಕತೆಯಾಗಿರುತ್ತದೆ. ಈ ರೀತಿ ಕ್ರಯದ ಮಾತುಕತೆಯಾಗಿತ್ತು ಎಂದು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನನ್ನ ತಕರಾರಿನಲ್ಲಿ ಸಲ್ಲಿಸಿಲ್ಲ ಎಂದರೆ ಗೊತ್ತಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ನಾನು ತಿಳಿದುಕೊಂಡಿಲ್ಲ. ಕ್ರಯದ ಮಾತುಕತೆಯಾದ ನಂತರ ಕ್ರಯಪತ್ರ ನೋಂದಣಿಯಾಗುವ ನಡುವೆ **1**ನೇ ಪ್ರತಿವಾದಿ ನನ್ನನ್ನು ಭೇಟಿಯಾಗಿದ್ದಾರೆ. ಈ ರೀತಿ ಭೇಟಿಯಾಗಲು ನನ್ನ ಅಂಗಡಿಯ ಹತ್ತಿರ ಮತ್ತು ದಾವಾ ಆಸ್ತಿಯ ಹತ್ತಿರ ಬಂದಿರುತ್ತಾರೆ. ಯಾವ ದಿನಾಂಕದಂದು ನಿಖರವಾಗಿ ಭೇಟಿಯಾಗಿದ್ದಾರೆಂದು ಹೇಳಲು ಆಗುವುದಿಲ್ಲ. **1**ನೇ ಪ್ರತಿವಾದಿಯು ಮಾರ್ಕೆಟ್‌ಗೆ ಬಂದಾಗ ನನ್ನ ಹತ್ತಿರ ಮಾತನಾಡಿಕೊಂಡು ಹೋಗುತ್ತಿದ್ದರು, ನಂತರ ನೋಂದಣಿಯ ದಿನದಂದು ಬಂದಿರುತ್ತಾರೆ. ಈ ಬಗ್ಗೆ ನನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.